ನವೆಂಬರ್ 2016

# ಕಾನನ

ನಿಸರ್ಗದೆಡೆಗೆ ಪಯಣ



BANNERUGHATTA

WILDLIFE CONSERVATION GROUP

# ಕಾನನ

ನಿಸರ್ಗದೆಡೆಗೆ ಪಯಣ




ಮುಖಪುಟ

ಏರೋಪ್ಲೇನ್ ಚಿಟ್ಟೆ

ನವೆಂಬರ್ 2016

BANNERUGHATTA

WILDLIFE CONSERVATION GROUP



* ಕಾಗೆ. . . ಬಂಗಾರ. . .
* ಧರೆ ಹತ್ತಿ ಉರಿದೊಡೆ ನಿಲಬಹುದೆ. . .?
* ಹಾವು ಕಾಲು ಕಳೆದುಕೊಂಡಿತು ಹೇಗೆ?
* ಗಳೊಳಗೆ – ಗಳಿಲ್ಲ (ಕವನ)
* ಪ್ರಕೃತಿ ಬಿಂಬ

**ಲೇಖಕ ವೃಂದ**

ಮುರಳಿ .ಎಸ್

ಕಲುಬಿ ಬ್ರದರ್ಸ್

ಶಂಕರಪ್ಪ .ಕೆ .ಪಿ

ಕೃಷ್ಣನಾಯಕ್

ಶ್ರೀನಿವಾಸ್ .ಕೆ .ಎಸ್

**ವಿನ್ಯಾಸ**

ಅಶ್ವಥ .ಕೆ.ಎನ್

**ಮುಖಪುಟ ಛಾಯಾಚಿತ್ರ**

ಅಂಕಿತ್ ಚಿಂತಪಲ್ಲಿ

**ಪರಿಷ್ಕರಣೆ**

ಮುರಳಿ .ಎಸ್

© Ankit Chintapali



ತಡೋಬ ರಾಷ್ಟ್ರೀಯ ಉದ್ಯಾನವನ, ಮಹಾರಾಷ್ಟ್ರ. © ಅಂಕಿತ್ ಚಿಂತಪಲ್ಲಿ

ವಿಜ್ಞಾನಿಗಳು ಹೇಳುವಂತೆ 2010 ರ ಪ್ರಕಾರ ಎರಡು ಮಿಲಿಯನ್ ವಿವಿಧ ಜಾತಿಯ ಸಾಗರಜೀವಿಗಳು ಇವೆ ಎನ್ನುತ್ತಾರೆ. ಸಧ್ಯ ಇಲ್ಲಿಯವರಿಗೆ, ಸಾಗರಜೀವಿಗಳ ಗಣತಿಯಲ್ಲಿ ಮೀನುಗಳ ಜಾತಿಯ ಪಾಲು 15,304 ಎಂಬುದು ತಿಳಿದುಬಂದಿದೆ. ಸಂಯುಕ್ತ ರಾಷ್ಟ್ರಗಳ ವರದಿಯ ಪ್ರಕಾರ ಮೂರನೇ ಒಂದು ಭಾಗದಷ್ಟು ಮೀನುಗಾರಿಕೆಯು ಕಡಿಮೆಯಾಗುತ್ತಾ ಬರಲು ಸಾಗರಗಳ ಮಾಲಿನ್ಯ ಮತ್ತು ಜಾಗತೀಕ ತಾಪಾಮಾನ ಕಾರಣಗಳಾಗಿವೆ. ಹೊರತಾಗಿ ನಗರೀಕರಣದ ಪ್ರಭಾವದಿಂದ ಉತ್ಕೃಷ್ಟಮಟ್ಟದ ಮಾಲಿನ್ಯ ದೆಹಲಿ, ಕೋಲ್ಕತಾ, ಮುಂಬೈ, ಆಗ್ರಾ, ಚೈನ್ನೈ ಮತ್ತು ಬೆಂಗಳೂರುನಂತಹ ಮಹಾನಗರಗಳಲ್ಲಿನ ಕೆರೆ-ಕುಂಟೆ, ನದಿಗಳು ಕೊಳಚೆ ಹೊತ್ತೊಯುವ ಹಳ್ಳಗಳಾಗಿ ಸಮುದ್ರ ಸೇರುತ್ತಿವೆ. ಇಂತಹ ಸಮಯದಲ್ಲಿ ನಾವು-ನೀವು ಎಲ್ಲ ವಿಶ್ವ ಮೀನುಗಾರಿಕೆಯ ದಿನವನ್ನು ನೆನಪಿಸಿಕೊಳ್ಳಲೇಬೇಕು. . .!



# ಕಾಗೆ...ಬಂಗಾರ...

ಬಾಲ್ಯದ ಆ ದಿನಗಳಲ್ಲಿ ಕಾಣದಂತೆ ಮನ ಗೆದ್ದ ಜೀವಿಯೆಂದರೆ ಕಾ ಕಾ ಕಾಗೆ. ಅದರ ಕೂಗಿನನುಸಾರವಾಗಿ ಹೆಸರಿಟ್ಟ ಏಕೈಕ ಪಕ್ಷಿ ಇರಬಹುದು 🤔 . ಮನೆಯ ಏರಿಯಾದ ಸುತ್ತಮುತ್ತ ಸಾಬರು ಹೆಚ್ಚಿದ್ದರು. ಅನೇಕ ಬಾರಿ ಬುರ್ಕಾ ದಾರಿ ಮಹಿಳೆಯರನ್ನು ಕಂಡು, ಪ್ರಪಂಚ ಅರಿಯದ ಮನಸ್ಸಿಗೆ ನಾನಾ ಆಲೋಚನೆಗಳು ಬರುತ್ತಿದ್ದವು. ಇವರೇನು ತಪ್ಪು ಮಾಡಿರುವರೆ, ಹೊರಗಿನ ಪ್ರಪಂಚಕ್ಕೆ ಕಾಣಿಸದಂತೆ ತಟ್ಟಿದ ಶಾಪವೇ, ಪಿಳಿ ಪಿಳಿ ಕಣ್ಣು ಬಿಟ್ಟರೆ ಬೇರೇನೂ ತಿಳಿಯದು. ಮೂಗಿಗಿರುವ  ಫಿಲ್ಟರ್ ನಿಂದ ಪರಿಶುದ್ಧ ಗಾಳಿಯ ಸೇವನೆ ಒಂದು ಪ್ಲಸ್ ಪಾಯಿಂಟ್. ಅದೆಲ್ಲ ಇರಲಿ ಆದರೆ ಕಣ್ಣಿಗೆ ಕುಕ್ಕುವುದು ಕಪ್ಪು ಬಣ್ಣ. ಎಲ್ಲಾ ಕಾಲದಲ್ಲೂ ಇದನ್ನೇ ಧರಿಸುವರು...ಸೆಕೆ....ಇನ್ನೇನೇನೋ ಉಹಾಪೋಹಗಳು. ಆದರೆ ಈ ಆಲೋಚನೆಯ ಕೊಂಡಿ ಲಾಕ್ ಆಗಿದ್ದು ಕಾಗೆಗೆ 🐣 . ಬೆಂಗಳೂರಿನಲ್ಲಿ ಆ ಕಾಲದಲ್ಲಿ ಅಷ್ಟೇನೂ ಪರಿಸ್ಥಿತಿ ಹದಗೆಡದಿದ್ದರೂ ಬೇಸಿಗೆಯಲ್ಲಿ ಶಾಖ, ಸೆಕೆ ಇರುತಿತ್ತು. 25 ವರ್ಷಗಳ ಹಿಂದಿನ ಮಾತು. ಸಮತೋಲನ ಸಾಕಷ್ಟು ಪ್ರಾಕೃತಿಕವಾಗಿತ್ತು. ಆಗತಾನೇ ವಿಜ್ಞಾನದ ಪಾಠವೊಂದರಲ್ಲಿ ಕಪ್ಪು ಬಣ್ಣ ಹೆಚ್ಚು ಶಾಖ ಹೀರುತ್ತವೆ ಆದ್ದರಿಂದಲೇ ಮರುಭೂಮಿ ಪ್ರದೇಶದವರು ತಂಪಾಗಿರಲು ಬಿಳಿ ಬಟ್ಟೆ ಧರಿಸುತ್ತಾರೆಂಬ ಪರಿಕಲ್ಪನೆ ಮೂಡಿಬಂದಿತ್ತು. ಆದರೆ ಈ ಕಾಗೆ, ಹೇಗೆ ಊಸರವಳ್ಳಿಯಂತೆ ಬಣ್ಣ ಬದಲಾಯಿಸದೆ ಸರ್ವ ಋತುಗಳಲ್ಲೂ ಕಪ್ಪುತನವನ್ನು ಕಾಯ್ದುಕೊಳ್ಳುತ್ತದೆ. ಈ ಪಕ್ಷಿಗಳಿಗೂ ಆ ಮಹಿಳೆಯರಿಗೂ ಕಪ್ಪು ಹೊದಿಕೆಯ ಸಾಮ್ಯ ಇದೇ ಎಂದೇ ಬಹಳ ವರ್ಷದ ಬಾಲ್ಯದ ನಂಬಿಕೆ.



ಒಮ್ಮೆ ಆ ಬೀದಿಯ ಹುಡುಗನೊಬ್ಬ ಕಾಗೆಯೊಂದನ್ನು ಸಾಕಿದ್ದ. ಈ ಮಹಿಳೆಯರಿಗೆ ಮಾತ್ರ ಸಾಕುವ ಹಕ್ಕಿರುವುದು ಅವರ ನಂತರ ತಮ್ಮ ಮಕ್ಕಳಿಗೆ ಹಸ್ತಾಂತರಿಸುತ್ತಾರೆ ಎಂಬ ನಂಬಿಕೆ ಬೇರೆ ಮೂಡಿತ್ತು. ಮನೆಯಲ್ಲಿ ಅತಿವಿರಳವಾಗಿ ಆಹಾರಮಿಕ್ಕುತಿತ್ತು.

ಮಿಕ್ಕ ಆಹಾರ ಪದಾರ್ಥವನ್ನು ಕಾಗೆಗಳು ಖಾಲಿ ಮಾಡುವುದರಲ್ಲಿ ಎತ್ತಿದ ಕೈ. ಎಂದೋ ಒಮ್ಮೆ ಖೋ ಖೋ ಆಟವಾಡಿ ನಂತರ ಶಾಲೆ ಕಡೆಗೆ ಹೊರಟೆ. ಬೆವರು ಹನಿಹನಿಯಾಗಿ ಮುತ್ತಿನಂತೆ ಮುಖವನ್ನು ಮುತ್ತುತ್ತಿತ್ತು. ಇದ್ದಕ್ಕಿದ್ದಂತೆ ತೊಪ್ಪನೆ ಮಾಂಸದ ಮುದ್ದೆಯೊಂದು ತಲೆಯ ಮೇಲೆ ಬಿದ್ದು ಬೆಚ್ಚನೆಯ ಅನುಭವವಾಯಿತು. ನೋಡಿದರೆ ಹಕ್ಕಿ ಮರಿ... *ಚಿಕ್ಕವನಿದ್ದಾಗ ಚಿಕನ್ ಅಂಗಡಿಗೆ ನನ್ನನೇ ಕಳುಹಿಸಲಾಗುತಿತ್ತು. ಒಳ್ಳೆಯ ಮಾಂಸ ತರುತ್ತೇನೆಂಬ ನಂಬಿಕೆ. ಕೋಳಿಗಳ ಬರ್ಬರ ಹತ್ಯಾಕಾಂಡ, ರಕ್ತದೋಕುಳಿ, ಆಕ್ರಂದನ ಗ್ರಹಿಸಿದ್ದು ಬಿಟ್ಟರೆ ಯಾವ ಪಕ್ಷಿಯನ್ನು ಮುಟ್ಟಿದ ಅನುಭವ ಇರಲಿಲ್ಲ. ಮನೆಯ ಬಳಿ ಸಾಕಿದ್ದ ಕೋಳಿಗಳು ಅಷ್ಟೇನೂ ಹಾರುವ ಸಾಹಸ ಕೈಗೊಳ್ಳುತ್ತಿರಲಿಲ್ಲವಾದ್ದರಿಂದ ಪ್ರಾಣಿಗಳೆಂದೇ ಭಾವಿಸಿದ್ದೆ.* ಇನ್ನು ಜೀವವಿದ್ದ ಆ ಜೀವಿ ನೋಡಿದಾಕ್ಷಣ ಕೋಳಿ ಅಂಗಡಿಯ ಅಷ್ಟೂ ಚಿತ್ರಣ ಮಿಂಚಿನ ವೇಗದಲ್ಲಿ ಕಣ್ಮುಂದೆ ಚಿತ್ರೀಕರಣಗೊಂಡಂತಾಯಿತು. ಯಾರೋ ದುರುಳರು ಇದನ್ನು ಅಂಗಡಿಯಿಂದ ಎಸೆದಿರಬೇಕು ಎಂದು ಸುತ್ತಮುತ್ತ ಕಣ್ಣಾಡಿಸಿದೆ.



ಶಾಲೆಯ ಹಾಗೂ ವಸತಿ ಪ್ರದೇಶವಾದ್ದರಿಂದ ಅಂತಹ ಅಂಗಡಿಗಳು ಕಾಣಸಿಗಲಿಲ್ಲ. ಕಿರ್ರ್ ಕಿರ್ರ್ ಗುಟ್ಟುತ್ತಿದ್ದ ಹಕ್ಕಿ ಮರಿಯನ್ನು ಕೈಯಲ್ಲಿ ತೆಗೆದುಕೊಳ್ಳುವ ಆಲೋಚನೆ ಹರಿದು ನಡ ಬಗ್ಗಿಸುವಷ್ಟ್ಟಿಗೆ ಸ್ನೇಹಿತ " ಹೇ ನೋಡೋ ತಲೆಯ ಮೇಲೆ ಎಂದು ತಲೆಯನ್ನೇ ಕಿತ್ತು ಹಾಕುವಂತೆ ಮೇಲೆ ಮಾಡಿಸಿ ಗೂಡೊಂದನ್ನು ತೋರಿಸಿದ. ಅದು ಕಾಗೆಯ ಗೂಡೆಂದು ಖಚಿತ ಪಡಿಸಿದ. ಓಹೋ... ಅದನ್ನು ಮರಳಿ ಗೂಡಿಗೆ ಸೇರಿಸಬೇಕೆಂದು ನಿರ್ಧರಿಸಿದೆವು. ಮಾಂಸದ ಮುದ್ದೆಯನ್ನು ಕೈಯಲ್ಲಿ ಮೆಲ್ಲನೆ ಎತ್ತುಕೊಂಡೆ. ಚೀರಾಡುತ್ತ ಬಾಯಿ ತೆಗೆದದ್ದನ್ನು ಅದೇ ಮೊದಲ ಬಾರಿಗೆ ಕಂಡೆ. ಯಾವುದೇ ಹಲ್ಲುಗಳಿರಲಿಲ್ಲ. ನಸುಗೆಂಪು ಬಣ್ಣದ ಮೃದುವಾದ ಚರ್ಮ.... ಆಹಾರಕ್ಕಾಗಿ ಹಂಬಲಿಸಿತೋ ಅಥವಾ ನೋವಿನ ಆಕ್ರಂದನವೋ ನಾ ಹೇಳದಾದೆ. ಪುಕ್ಕ ಮೂಡದ ದೇಹದಲ್ಲಿ ರೆಕ್ಕೆ ಮೂಡಿದ್ದನ್ನು ನೋಡಿ ಕೊಂಚ ಗಲಿಬಿಲಿಯಾದೆ. ಸಣ್ಣ ಸಣ್ಣ ಕಾಲುಗಳು, ಅದರಲ್ಲಿ ಮೃದುವಾದ

ಉಗುರುಗಳು…ಇವೆಲ್ಲ ಮನನಾಟಿತು. ಇನ್ನ ಗೂಡಿಗೆ ಸೇರಿಸುವ ಮುನ್ನವೇ, ಆಹಾ! ಮರಿಯೊಂದನ್ನು ಕಾಪಾಡಿದೆ ಎಂದು ಗರ್ವದ ಭಾವನೆ ಮೂಡಿತ್ತು. “ಎಲೈ ಮೂಢ, ಅಹಂಕಾರಿ ಮಾನವ ಎಂದು ನೆನಪಿಸಲೆಂದೇ ಕೈಯಲ್ಲಿ ಹಿಡಿದಾಕ್ಷಣ ಆಹಾರ ಅರಸಿ ಹೊರಟಿದ್ದ ತಾಯಿ ಕಾಗೆ ತನ್ನ ಎಲ್ಲ ಶಕ್ತಿಯನ್ನೋಗ್ಗೂಡಿಸಿ ನೇರ ೯೦ ಡಿಗ್ರಿ ಕೊನದಲ್ಲಿ ನನ್ನ ಸುಳಿಯಮೇಲೆ ತನ್ನ ಭರ್ಜಿಯಿಂದ ಮೀಟಿತು. ಹೆಮ್ಮೆಯ ಸುಳಿಯಲ್ಲಿ ಸಿಲುಕಿದ್ದ ಭ್ರಮೆಯಿಂದ ಹೊರ ಬಂದಾಗ ವಾಸ್ತವ ಅರಿವಾಯಿತು. ಅದು ಕಾಗೆ ಮರಿ, ಕುಟಿಕಿದ್ದು ತಾಯಿ ಕಾಗೆಯೆಂದು ಅರಿವಾಯಿತು. ತನ್ನ ಮರಿಗೋಸ್ಕರ ನನ್ನನ್ನೇ ಹಾರಿಸುವ ಶಕ್ತಿ ಹೊಂದಿದ್ದು ತಡ ಮಾಡಿದರೆ ಉಳಿಗಾಲವಿಲ್ಲವೆಂದು ಗೂಡಿಗೆ ಮರಳಿ ಸೇರಿಸಬೇಕೆನ್ನುವ ಮನೋಭಾವ ಹಾರಿಹೋಗಿ ಮರಿಯನ್ನು ಪಕ್ಕಕ್ಕೆ ಎಸೆದು ಕಾಲ್ಕಿತ್ತೆ. ಕ್ಲಾಸ್ ರೂಮಿನ ಒಳಹೋಗಿ ಸುಳಿಯಲ್ಲಿ ಕೈಯಾಡಿಸಿದಾಗ ಬೆಚ್ಚನೆಯ ಅನುಭವವಾಯಿತು, ಬೆರಳು ಕೆಂಪಗಾಗಿತ್ತು. ಮನೆಯಲ್ಲಿ ವಿಷಯ ಪ್ರಸ್ತಾಪಿಸಲಿಲ್ಲವಾದ್ದರಿಂದ ಶಾಸ್ತ್ರೋಕ್ತಿಗಳೇನು ನಡೆಯಲಿಲ್ಲ.

ಹತ್ತಾರು ವರ್ಷಗಳ ನಂತರ ಯಾವುದೇ ಪ್ರಚೋದನೆ ಇಲ್ಲದೆ ಮತ್ತೊಮ್ಮೆ ಕಾಗೆಯಿಂದಲೇ ಕುಟುಕಿಸಿಕೊಂಡೆ. ಆ ನೋವು ಹಲವಾರು ವರ್ಷ ಮಾನಸಿಕವಾಗಿ ಉಳಿದಿತ್ತು. ಮೊದಲೇ ಮನೆಯ ಆರ್ಥಿಕ ಸ್ಥಿತಿ ದುರ್ಬಲವಾಗಿದ್ದರಿಂದ ಇಲ್ಲದ ಪ್ರಾರಬ್ಧಗಳು ಎಂದು ಮನೆಮಂದಿ ಗೊಣಗಾಡಿದರು. “ನೀನೇಕ್ಕೋ ಹೋಗಿದ್ದೆ ಅದರ ಹತ್ತಿರ ಕಡ್ಡಿ ಇಡೋಕೆ” ಎಂಬ ಪ್ರಶ್ನೆಗೆ ನನ್ನ ಅಮಾಯಕ ಮೌನವೇ ಉತ್ತರವಾಗಿತ್ತು. ಹಲ್ಲಿಯ ಪಾದಸಂಧಿಯಲ್ಲಿ ನಿರ್ವಾತ ಏರುಪೇರಾಗಿ ಬಿದ್ದರೆ ವಿಮುಕ್ತಿಗೆ, ಕಂಚಿಗೆ ಹೋಗಿ ಚಿನ್ನದ ಹಲ್ಲಿ  ಮುಟ್ಟಬೇಕೆಂಬ ಆಲೋಚನೆ ಮಿಂಚಿನ ವೇಗದಲ್ಲಿ ಹರಿದು ಬರುತ್ತದೆ. ಆದರೆ ಕಾಗೆಗೆ ಎಲ್ಲಿ ಎಂದು ಮನೆ ಮಂದಿಗೆ ತಿಳಿದಿರಲಿಲ್ಲ. ಹೀಗೆ ಪ್ರತಿ ಜೀವಿಗೆ ಒಂದೊಂದು ದೇವರಿದ್ದಿದ್ದರೆ ಈ ನೆಪದಲ್ಲಿ ಇಡೀ ಭಾರತವನ್ನು ಸುತ್ತಬಹುದಾಗಿತ್ತು ಎಂದು ಹಿಗ್ಗಿದೆ . ಅನೇಕ ಬಾರಿ ಯಾರು ನೋಡದ ಹಾಗಿ ಹಲ್ಲಿಯ ಆಯ ತಪ್ಪಿಸಿ ಮೈಮೇಲೆ ಬೀಳಿಸಿಕೊಂಡಿದ್ದೆ. ಸಂಸಾರ ನಡೆಸುವುದೇ ಕಷ್ಟವಿದ್ದಾಗ ಕಂಚಿಗೆ ಹೋಗುವುದನ್ನು ಮೊಟಕುಗೊಳಿಸಿ ಲೋಕಲ್ ಗುಡಿಗೆ ಹೋಗಿ ಪೂಜೆ ಮಾಡಿಸಿದ್ದರಿಂದ ಶತಕೋಪವುಂಟಾಗಿತ್ತು. ಪ್ರವಾಸ ಕೈ ತಪ್ಪಿ ಹೋದ್ದರಿಂದ ಹಲ್ಲಿಯ ದೇವರನ್ನು ಶಪಿಸಿದ್ದೂ ಉಂಟು. ಹೀಗೆಯೇ ಕಾಗೆಗೆ ಹತ್ತಿರದ ಶನಿ ದೇವರ ಗುಡಿಗೆ ಹೋದರೆ ಸಾಕು ಎಂದು ಹೇಳಿದಾಗ ಮತ್ತೊಮ್ಮೆ ಸಿಟ್ಟಾಯಿತು. ಅಂತೂ ಈ ಕಾರಣಗಳಿಂದ ಇದುವರೆಗೂ ಪ್ರವಾಸದ ಅವಕಾಶ ಬರಲಿಲ್ಲ. ಬೆಳಗಿನ ಜಾವದಲ್ಲಿ ಹುಂಜಕ್ಕೆ ಬದಲಾಗಿ ಕಾಗೆ ಕೂಗಿದರೆ ನೆಂಟರ ಆಗಮನ ನಿಶ್ಚಿತ. ಅನೇಕ ಬಾರಿ ಈ ರೀತಿಯಾಗಿದ್ದರೂ ನೆಂಟರಿಷ್ಟರು ಆಗಮಿಸಲಿಲ್ಲ.




ಕಪ್ಪನೆಯ ಬಣ್ಣದ ಅಚ್ಚರಿ ಮುಂದುವರೆಸುವುದಾದರೆ.... ಕಪ್ಪನೆಯ ದೇಹದ ಕಾಗೆ ಶಾಖವೇರಿ ಬಿಸಿ ದೇಹಿಗಳು ಎಂಬ ಕಲ್ಪನೆ ಇನ್ನೂ ತೋರೆದಿರಲಿಲ್ಲ. ಹುಟ್ಟಿದ ಮರಿ ಕಪ್ಪಗಿಲ್ಲವಾದ್ದರಿಂದ ಅದರ ತಾಯಿ ಅದನ್ನು ಸುಟ್ಟು ಕರ್ರಗೆ ಮಾಡಿಸುತ್ತದೆ, ಇದು ಅವುಗಳಿಗೆ ತಟ್ಟಿರುವ ಶಾಪ ಎಂದು ನಂಬಿದ್ದೆ. ಕಪ್ಪು ಕಾಗೆ ಗಂಡು, ಬೂದು ಕತ್ತಿನ ಕಾಗೆ ಹೆಣ್ಣು (*ನೋಡಲು ಸ್ವಲ್ಪ ಸುಂದರ*) 😚 ಎಂಬ ಅಪಭಾವನೆ ಎಲ್ಲಾ ಓದು ಮುಗಿದು ಪಕ್ಷಿವೀಕ್ಷಣೆಗೆ ತೊಡಗಿಸಿಕೊಂಡಾಗಲೇ ಅಳಿಸಿಹೋದದ್ದು.

**ಅಂದಿನ ದಿನಗಳು**

ಸಾಹಿತ್ಯದ ಉಲ್ಲೇಖಗಳಲ್ಲಿ ಬಹಳ ಕಡಿಮೆ ಕಾಣಸಿಗುವ ಈ ಹಕ್ಕಿ, ಮಹಾಕಾವ್ಯಗಳಲ್ಲಿ, ಕವಿ ಕವನಗಳಲ್ಲಿ, ಕಥೆ ಕಾದಂಬರಿಗಳಲ್ಲಿ ಮಿಂಚಿದ್ದು ವಿರಳ. ಆದರೆ ಸಂಸ್ಕೃತ ಸಾಹಿತ್ಯದಲ್ಲಿ ಕೆಲವು ಕುತೂಹಲಕಾರಿ ಉಲ್ಲೇಖಗಳಿವೆ. ಮಹಾಭಾರತದ ಕಾಲದಲ್ಲಿ ಮೀನು-ಮಾಂಸ, ಇನ್ನಿತರ ಕದ್ದರೆ ಅವನಿಗೆ ಜಂಗಲ್ ಕ್ರೋ ಕಬ್ಬಿಣ ಇನ್ನಿತರೆ ಸಾಮಾಗ್ರಿಗಳನ್ನು ಕದ್ದರೆ ಅವನು ಹೌಸ್ ಕ್ರೋ ಆಗುವಂತೆ ಶಪಿಸಲಾಗುತ್ತಿತ್ತು. ಹಿಂದೂ ಧರ್ಮದ ಐದು ವರ್ಗೀಕರಣ, ಕಾಗೆಯ ಬೇರೆ ಬೇರೆ ಜಾತಿಗಳನ್ನು ಬಿಂಬಿಸುತ್ತದೆ ಎಂದರೆ ಆಶ್ಚರ್ಯವೇ ಸರಿ. ಬಾಲ್ಯದ ಕೌತುಕದ ವಿಷಯವಾದ, ಸುಟ್ಟರೆ ಕಪ್ಪಾದೀತು ಎಂಬ ಊಹೆ ಕೂಡ ಸೂರ್ಯನಿಂದ ಸುಟ್ಟು ಕರಕಲಾದ ಸಂಗತಿ ಪ್ರಾಚೀನ ಸಾಹಿತ್ಯದಲ್ಲಿ ಪ್ರಸ್ತಾಪಿಸಿದೆ. ವಾಲ್ಮೀಕಿ ರಾಮಯಣದ ಅಯೋಧ್ಯಕಾಂಡದಲ್ಲಿ ಇಂದ್ರನ ಮಗ ಜಯಂತನೆಂಬುವನು ಸೀತೆಗೆ ಅವಮಾನ ಮಾಡಿದನೆಂದು ರಾಮ ಒಕ್ಕಣ್ಣು ಕಾಗೆಯಾಗು ಎಂದು ಶಪಿಸಿದ್ದನಂತೆ. ಪೌರಾಣಿಕ ಅಗಸ್ತ್ಯ ಮುನಿಯು ಭೂಮಿಯ ಸಮತೋಲನ ಕಾಯ್ದುಕೊಳ್ಳಲು ದಕ್ಷಿಣ ಭಾರತಕ್ಕೆ ಬಂದಾಗ ಕೃಷ್ಣನನ್ನು ತಪ್ಪಸ್ಸು ಮಾಡಿ ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ಗುಡಿಯೊಂದನ್ನು ಪ್ರತಿಷ್ಠಾಪಿಸಿದ್ದನು. 🙏



ಸುತ್ತಲಿನ ಪ್ರಶಾಂತತೆ ಕಾಪಾಡಲು ಮುನಿಯು ಹಂಸಗಳನ್ನು ಬರಮಾಡಿಕೊಂಡು ಕಾಗೆಗಳು ಕಣ್ಮರೆಯಾಗುವಂತೆ ಶಪಿಸಿದ್ದನಂತೆ. ಸೂರ್ಯಪುತ್ರ ಶನಿ ದೇವನಿಗೆ ಬೆಳಕೇ ಶತ್ರುವಾಗಿ ಎಲ್ಲವೂ ಕತ್ತಲೆ ಬೇಕೆಂದು, ಅದೇ ರೀತಿಯಾಗಿ ಕಾಗೆಯನ್ನೇ ತನ್ನ ವಾಹನವನ್ನಾಗಿ ಆರಿಸಿಕೊಂಡಿದ್ದ. ವಸಂತರಾಜನ ನುಡಿಯಂತೆ ಭವಿಷ್ಯ ನುಡಿಯಲಿಕ್ಕೆ ಕಾಗೆಯೇ ಉತ್ತಮವಂತೆ. ಪುರಾಣಗಳ ಪ್ರಕಾರ 35 ರಷ್ಟು ಸಮಾನಾರ್ಥಕ ಹೆಸರುಗಳು ಕಾಗೆಗೆ ಮಾತ್ರ ಇವೆ. ಜ್ಯೋತೀಶ್ವರನು ತನ್ನ “ವರ್ಣ ರತ್ನಾಕರ” ಎಂಬ ಕಾವ್ಯಕ್ಕಾಗಿ ಮೀಸಲಿಟ್ಟ ಪದ ಪುಂಜದ ಪುಸ್ತಕದಲ್ಲಿ ಕಳ್ಳನಿಗಿರಬೇಕಾದ ಗುಣಗಳಲ್ಲಿ “ಕಾಗೆಯಂತ ಕಣ್ಣು” ಎಂದಿದ್ದಾನೆ. ಮುಂಜಾನೆಯ ಕೂಗಿನ ಅಥವಾ ಅತಿಹೆಚ್ಚು ಕೂಗುವ ಸಂಕೇತ ನೆಂಟರ ಆಗಮನ, ಸತ್ತಾಗ ಪಿಂಡ ಸ್ವೀಕರಿಸಿದರೆ ಸ್ವರ್ಗ ಪ್ರಾಪ್ತಿ, ಇನ್ನಿತರೆ ನಂಬಿಕೆಗಳು ಈಗಲೂ ಪ್ರಚಲಿತವಾಗಿವೆ. ನನ್ನ ತಂಗಿಯ ಮರಣವಾದಾಗ ಕಾರ್ಯ ಮುಗಿದಮೇಲೆ ಮಳೆಯ ಕಾರಣ ಕಾಗೆಗಳು ಪಿಂಡ ಸೇವಿಸಲು ಬರದೇ ಇದ್ದ ಕಾರಣ ಶೋಕದ ಪರಮಾವಧಿಗೆ ಎಲ್ಲರನ್ನು ದೂಡಿದ್ದುಂಟು. ಬ್ರಹ್ಮ ದೇವನು 😭 ಕಾಗೆಯೊಂದಕ್ಕೆ ಕಥಿಸಿದ್ದು ಭುಶುಂಡಿ ರಾಮಯಣವೆಂದೇ ಪ್ರಸಿದ್ಧಿಯಾಯಿತು.



ರೋಮನ್, ಗ್ರೀಕ್ ನಾಗರೀಕತೆಗಳಲ್ಲಿ ಇವುಗಳನ್ನು ಅಪಶಕುನದ ಸೂಚನೆಗಳೆಂದೇ ಭಾವಿಸಲಾಗಿದೆ. ಅವರಲ್ಲಿಯೂ ಅನೇಕ ನಂಬಿಕೆಗಳು ನಮ್ಮಂತೆಯೇ ಮನೆಮಾಡಿದ್ದವು. ಕುತೂಹಲದ ವಿಷಯವೆಂದರೆ ಸಾವಿರ ವರ್ಷಗಳಷ್ಟು ಇತಿಹಾಸದ ಲಂಡನ್ ಗೋಪುರದಲ್ಲಿ 6 ಕಾಗೆಗಳ ವಾಸವನು ಕಾಯ್ದುಕೊಂಡು ಬಂದಿದ್ದಾರೆ. ಅವುಗಳ ಸಂಖ್ಯೆ ಕ್ಷೀಣಿಸಿದಲ್ಲಿ ರಾಜ್ಯದಲ್ಲಿ ಬರ ಉಂಟಾಗಿ ಜನಸಾಮಾನ್ಯರಿಗೆ ಕಂಟಕಗಳಾಗುತ್ತವೆ ಬಲವಾದ ನಂಬಿಕೆ. ರಾಣಿಯು ಅದಕ್ಕಾಗಿ ಕಾಗೆ ಪಡೆಯೊಂದನ್ನು ನೇಮಿಸಿದ್ದಳು, 👸 ಈಗಲೂ ಇದೆ. ಹಿಂದೊಮ್ಮೆ ಪ್ರಧಾನಿಯಾಗಿದ್ದ ಚರ್ಚಿಲ್, ಕಾಕಗಳ ಸಂಖ್ಯೆಯನ್ನು 8ಕ್ಕೆ ಹೆಚ್ಚಿಸಿದನು. ಆಹಾ! ಅವುಗಳಿಗಿರುವ ರಾಜ ಮರ್ಯಾದೆ ಹೇಳತೀರದು.

ಪಂಚತಂತ್ರದ ಕಾಕ ಗುಬ್ಬಕ್ಕ ಕಥೆ, ನೀರಿನ ಹೂಜಿಗೆ ಕಲ್ಲು ತುಂಬಿ ನೀರಿನ ಮಟ್ಟ ಏರಿಸಿ, ಕುಡಿದು ಬುದ್ಧಿವಂತಿಕೆ ಮೆರೆದ ಕಥೆಯಿಂದ ಹಿಡಿದು “ಏನಪ್ಪಾ ಕಾಗೆ ಹಾಸ್ತ್ರೀಯ ” ಎಂಬ ಸಾಮಾನ್ಯ ಬಾಯ್ನುಡಿ ಇಂದಿಗೂ ಎಂದೆದಿಗೂ ಪ್ರಚಲಿತ.

**ಇಂದಿನ ದಿನಗಳು**



ಭಾರತದಲ್ಲೇ 5 ಜಾತಿಯ ಕಾಗೆಗಳು ಕಾಣಸಿಗುತ್ತವೆ. ಕಾರ್ವಿಡೆ ಕುಟುಂಬಕ್ಕೆ ಸೇರಿದ ಇವು The jungle crow (*Corvus macrorhynchos*) ಮತ್ತು ***house crow*** (*Corvus splendens*)ಹೆಚ್ಚು ಕಂಡುಬರುತ್ತವೆ. ಕಾಶ್ಮೀರದ 'ಜಾಕ್ಡಾ' ಗಿಡುಗದ ಗಾತ್ರಕ್ಕೆ ಸಮನಾಗಿದೆ. ಖಗವರ್ಗಗಳಲ್ಲಿ "ಜೇ" ಗುಂಪು ಸ್ವಲ್ಪ ಬುದ್ಧಿವಂತ ಇರುತ್ತವೆ. "ಖಗ" ಹೇಗೆ ಕಾಗುಣಿತದಲ್ಲಿ ಅನುಕ್ರಮಿಕವಾಗಿ ವಿಶಿಷ್ಟವೋ ಹಾಗೆಯೇ "ಕಾಗೆ" ವ್ಯಾಕರಣದಲ್ಲಿ "ಖಗ" ಪದಕ್ಕೆ ಬಹಳ ಹತ್ತಿರ. ಬೇರಾವ ಪಕ್ಷಿಗೂ ಈ ಭಾಗ್ಯ ಲಭಿಸಿದ್ದಿಲ್ಲ. ತಲೆಯಿಂದ ಬಾಲದವರೆಗೂ ಕಡು ಕಪ್ಪು ಪುಕ್ಕಗಳು. ದಿಟ್ಟಿಸಿ ನೋಡಿದರೆ ಸೌರಮಂಡಲದ ಕಪ್ಪೆ ಕಾಣಿಸೀತು. ತಲೆ ಹಾಗೂ ಕುತ್ತಿಗೆ ಭಾಗದಲ್ಲಿ ಸ್ವಲ್ಪ ನೀಲಿಯ ಜಳಪು ಗೋಚರಿಸುತ್ತದೆ. ಇದ್ದಿಲ ಕಪ್ಪನ್ನು ಮರೆಮಾಚುವಂತಾ ಕಪ್ಪು. ಕತ್ತಿನ ಸುತ್ತಾ ಬೂದು ಬಣ್ಣದ ಲೇಪನವಿದ್ದರೆ - ಹೌಸ್ ಕ್ರೋ. ವಿರಳವಾಗಿ ತೊನ್ನು ತಗಲಿ ಬಿಳಿ ಕಾಗೆಯಾಗಿ ಬೇರೊಂದು ಹೊಸ ಜಾತಿ ಪಕ್ಷಿ ಕಂಡುಹಿಡಿದೆವು ಎಂಬ ಭ್ರಮೆ ಪಕ್ಷಿ ವೀಕ್ಷಕರನ್ನು ಆವರಿಸುದ್ದುಂಟು. 🙃 ಕೋಗಿಲೆಯ ಸೋಮಾರಿತನಕ್ಕೆ ಬಲಿಯಾದದ್ದು ಈ ಕಾಗೆಗಳೇ, ಅದರಲ್ಲಿಯೂ ಊರು ಕಾಗೆಗಳು ಹೆಚ್ಚು. ತನ್ನ ಮೊಟ್ಟೆಯೆಂದೇ ಕಾವು ಕೊಟ್ಟು ತನ್ನ ಮರಿಯೆಂದೇ ಸಾಕಿ ಸಲುಹಿ ಬೆಳೆಸುವ ಪರಿ, ಅಚ್ಚರಿ. ಈ ಲಕ್ಷಣದಿಂದ ಕಾಗೆ ಸಂತತಿಗೆ ನಷ್ಟದ ಬದಲು ಲಾಭವೇ ಹೆಚ್ಚೆಂದು 16 ವರ್ಷದ ಅಧ್ಯಯನ ಹೇಳುತ್ತದೆ. ಮೊಟ್ಟೆಯಿಟ್ಟ ಪರಾವಲಂಬಿ ಹಕ್ಕಿಗಳು ಇತರೆ ಅಪಾಯಗಳಿಂದ ಗೂಡನ್ನು ರಕ್ಷಿಸುತ್ತವೆ. ಕೋಗಿಲೆ ಮರಿಗಳು ಹೆಚ್ಚು ಆಹಾರಕ್ಕಾಗಿ ಬೊಬ್ಬಿಡುತ್ತವೆ, ಇದರಿಂದ ಪೋಷಕರು ಹೆಚ್ಚು ಆಹಾರ ತರಲು ಒತ್ತಡ ಹೇರುತ್ತದೆ. ಕಾಗೆಗಳು ಸ್ವಲ್ಪ ಮಟ್ಟಿಗೆ ಸಾಮಾಜಿಕ ಜೀವಿಗಳು. ಗುಂಪಿನಲ್ಲಿ ಆಹಾರಕ್ಕಾಗಿ, ಸಂಗಾತಿಗಾಗಿ, ತನ್ನ ಪ್ರದೇಶಕ್ಕಾಗಿ ಅನೇಕ ಜಗಳಗಳು ಸಾಮಾನ್ಯ. ಕಾಗೆಯೊಂದು ಸತ್ತಾಗ ಅವು ತೋರ್ಪಡುವ ಶೋಕಾಚರಣೆ ಗೊತ್ತೇ ಇದೆ. ಬಹುಶಃ ಇದರಿಂದಲೇ ಯಾರಾದರು ಸತ್ತಾಗ ಕಪ್ಪು ಬಟ್ಟೆಯ ಸಂಪ್ರದಾಯ ಮತ್ತು ಆಂದೋಲನಗಳಲ್ಲಿ ಕಪ್ಪು ಪಟ್ಟಿ ರೂಢಿಗೆ ಬಂದಿರಬಹುದು. 😉

ಅದೇನೇ ಇರಲಿ ಇನ್ನಷ್ಟು ಅಧ್ಯಯನಗಳು ಬಹಳ ಕುತೂಹಲಕಾರಿ ವಿಷಯಗಳನ್ನು ಬಿಚ್ಚಿಡುತ್ತದೆ. ಕಾಕಗಳು ಹೆಣ್ಣು-ಗಂಡು ಎಂದು ಮನುಷ್ಯನ ಮುಖವನ್ನು ಪ್ರತ್ಯೇಕವಾಗಿ ಗುರುತಿಸಬಲ್ಲದು. ವಸ್ತುವಿನ ಪರಿಮಾಣ

ಅರಿಯಬಲ್ಲದು. ಎಲ್ಲಿ ಹೆಚ್ಚು ಆಹಾರವಿದೆಯೆಂದು ಗುರುತಿಸಿ ಹೆಕ್ಕಬಲ್ಲದು. ಬಣ್ಣಗಳನ್ನು ಕೂಡ ಗುರುತಿಸುವ ಸಾಮರ್ಥ್ಯ ಹೊಂದಿವೆ. ಜ್ಞಾಪಕ ಶಕ್ತಿಯನ್ನು ಕೂಡ ಪರೀಕ್ಷಿಸಿ ಧೀರ್ಘ ಕಾಲ ಉಳಿಯುತ್ತದೆಂದು ಹೇಳಲಾಗಿದೆ.



ಅಟೆನ್ಬ್ ಬರೋ "ಲೈಫ್ ಆಫ್ ಬರ್ಡ್ಸ್" ಸಾಕ್ಷ್ಯಚಿತ್ರದಲ್ಲಿ ಕೆಂಪು, 🚦 ಹಸಿರು ಸಂಚಾರಿ ದೀಪಗಳ ಅರ್ಥವನ್ನು ಮತ್ತು ಅದನ್ನು ಮನುಷ್ಯರಿಗೆ ಹೇಗೆ ಅನ್ವಯಿಸುತ್ತದೆ ಎಂಬುದನ್ನು ಕರಾರುವಾಕ್ಕಾಗಿ ಅರ್ಥೈಸಿಕೊಂಡಿದೆ ಎಂದು ತೋರಿಸುತ್ತಾರೆ. ಉಲ್ಲಾಸಭರಿತ ಈ ಚಿತ್ರಣದಲ್ಲಿ ಬೀಜವೊಂದನ್ನು ಒಡೆಯಲು ಜೀಬ್ರ ಕ್ರಾಸಿಂಗ್ ಬಳಿ ಬೀಳಿಸಿ ಕಾದುಕುಳಿತಿರುತ್ತದೆ. ಕೆಂಪು ದೀಪ 🤐 ಬಂದಾಗ ಹೋಗಿ ಮೆಲ್ಲುತ್ತದೆ. ಇನ್ನೊಂದು ಚಿತ್ರಣದಲ್ಲಿ ಚಿಂಪಾಂಜಿ ಅಥವಾ ಸಸ್ತನಿಗಳಿಗೆ ಸೆಡ್ಡುಹೊಡೆಯುವಂತ ನಿದರ್ಶನ ಅತ್ಯಾಶ್ಚರ್ಯ ಉಂಟು ಮಾಡುತ್ತದೆ. ಸತ್ತ ಮರದ ದಿಮ್ಮಿಯೊಳಗೆ ಹುಳು 👂 ಕೊರೆಯುವುದನ್ನು ಆಲಿಸಿ ಕಡ್ಡಿಯಂತಹ ಸಲಕರಣೆ ಉಪಯೋಗಿಸಿ ಹುಳುಗಳನ್ನು ಇರುಸುಮುರುಸುಗೊಳಿಸಿ ಕಡ್ಡಿಯನ್ನು ಕಚ್ಚುವಂತೆ ಮಾಡಿ ಹುಳು ಹಿಡಿದಾಗ ಹೊರ ತೆಗೆಯುತ್ತದೆ. ಅದ್ಭುತವೇ ಸರಿ! ಭೂತಾನ್ ದೇಶದ ರಾಷ್ಟ್ರ ಪಕ್ಷಿಯ ಸ್ಥಾನ ಗಿಟ್ಟಿಸುವುದರಲ್ಲಿ ಆಶ್ಚರ್ಯವೇನಿಲ್ಲ.

ಊಟದ ನಂತರ ತಟ್ಟೆತೊಳೆಯುವಾಗ ಮಿಕ್ಕ ತುಣುಕುಗಳನ್ನು ಎಸೆದು ಗಾಳಿಯಲ್ಲೇ ಕ್ಯಾಚ್ ಹಿಡಿಯುವ ಆಟ, ಬಿದ್ದ ಕಸವನ್ನು ಹೆಕ್ಕಿ ಬುಟ್ಟಿಗೆ ಹಾಕುವ ಸಂಗತಿ ಎಲ್ಲವೂ ಬುದ್ಧಿವಂತಿಕೆಯ ವಿಷಯವನ್ನು ಪುಷ್ಟೀಕರಿಸುತ್ತವೆ. ನಾಗರಹೊಳೆಯಲ್ಲಿ ಒಮ್ಮೆ ಹುಲಿ 🐯 ಗಣತಿ ಮಾಡುವ ವೇಳೆ ಇಂತಹ ಸನ್ನಿವೇಶವೊಂದು ನಡೆದುಹೋಯಿತು. ನಡಿಗೆಯಲ್ಲಿ ಗಸ್ತು ತಿರುಗುವ ವೇಳೆ ಹುಲಿಯೊಂದು ಬೇಟೆಯಾಡಿರುವ ಸಂಜ್ಞೆ ಕಾಗೆಗಳ ಸಹಾಯದಿಂದ ಅಲ್ಲಿನ ವಾಚರ್ ಕಂಡುಹಿಡಿದ. ಬೇಟೆಯಾಡಿದ ನಂತರ ಮಿಕ್ಕ ಆಹಾರವನ್ನು ತಿನ್ನಲು ಗಿರಕಿ ಹೊಡೆಯುತ್ತಿದ್ದ ಸನ್ನಿವೇಶವದು. ಪರಿಶೀಲಿಸಿದಾಗ ರಕ್ತ ಸಿಕ್ತ ಹಂದಿಯ ದೇಹ ಕಂಡಿತು. ನಂತರ ಕೊಂಚ ಮುಂದೆ ಸಾಗಿದಾಗ ಹುಲಿಯನ್ನು 🙏 ಮುಖಾ ಮುಖಿ ಕಂಡೆವು. ಜೀವನದಲ್ಲಿ ಪ್ರಪ್ರಥಮ ಬಾರಿಗೆ ಸಾಲದೆಂಬಂತೆ ನಡಿಗೆಯಲ್ಲಿ ಹುಲಿಯನ್ನು ತೋರಿಸಿದ ಕಾಗೆಗೆ ನಾನು ಚಿರಋಣಿ.

**ಇನ್ಮುಂದಿನ ದಿನಗಳು**

ಸದಾ ಬದಲಾಗುವ ಪರಿಸರಕ್ಕೆ ಹೊಂದಿಕೊಳ್ಳುವುದರಲ್ಲಿ ಕಾಗೆಗಳದೇ ಮೇಲುಗೈ. ತಾನೊಬ್ಬನೇ ಬುದ್ಧಿವಂತ, ಜಗತ್ತಿನ ಒಡೆಯ ಎಂಬ ಮನುಷ್ಯನ ಅಟ್ಟಹಾಸಕ್ಕೆ ಕಾಗೆಗಳಲ್ಲದೆ ಎಲ್ಲಾ ಜೀವಿಗಳು ನಿಶ್ಯಬ್ಧವಾಗಿ ಸಹಿಸಿಕೊಂಡು, ತಾವು ಮಾಡದ ಕರ್ಮವನ್ನು ಅನುಭವಿಸುತ್ತಾ ಹೆಜ್ಜೆ ಹಾಕಿವೆ. ಕಾಗೆಗಳು ಆಹಾರ ಪದ್ದತಿಯಲ್ಲಿ ಅವಕಾಶವಾದಿಗಳು, ಮಿಶ್ರಹಾರಿಗಳು. ಪ್ರಕೃತಿಯ ಜಾಡಮಾಲಿ ವರ್ಗಕ್ಕೆ ಸೇರಿವೆ. ಅತಿವಿಶೇಷವಾಗಿ ಮನುಷ್ಯನಿಗೆ ಬಲು ಉಪಕಾರಿ. ಮನುಷ್ಯ ಬಿಸಾಡಿದ ಎಲ್ಲಾ ವಸ್ತುಗಳ ಅದರ ಜಠರ ಸೇರುತ್ತವೆ. ಮನುಷ್ಯ ಕಸ ಬಿಸಾಡುವುದು, ಕಾಗೆಗಳು ಸ್ವಚ್ಛತಾ ಕಾರ್ಯಕ್ರಮ ಕೈಗುಳ್ಳುವುದು....ನಡೆಯುತ್ತಲೇ ಬಂದಿದೆ. ಹೆಸರಿಗೆ ತಕ್ಕಂತೆ ಜಂಗಲ್ ಕ್ರೋ ಗಳು ಅರಣ್ಯಕ್ಕಿಂತ ಮನುಷ್ಯನ ವಸಾಹತುಗಳಲ್ಲೇ ನೆಲೆಯೂರಿವೆ. ಹೆಸರು ಕೂಡ "ಲಾರ್ಜ್ ಬಿಲ್ಡ್ ಕ್ರೋ" ಎಂದು ಬದಲಿಸಿ ರೂಢಿಸಿಕೊಂಡಿದ್ದಾಯಿತು. ಆದರೆ ಹೌಸ್ ಕ್ರೋ ಗಳು ಅರಣ್ಯ ಪರದೇಶಗಳಲ್ಲಿ ಕಾಣಸಿಗುವುದಿಲ್ಲ. ಅನೇಕ ಬಾರಿ ಎರಡು ಜಾತಿಗಳು ಒಟ್ಟೊಟ್ಟಿಗೆ ಆಹಾರ ಅರಸುತ್ತವೆ. ಜಂಗಲ್ ಕ್ರೋಗಳು ಹೆಚ್ಚು ಆಕ್ರಮಣಕಾರಿ. ಆದರೆ ಎರಡೂ ಜಾತಿಯ ಹೆಣ್ಣು ಗಂಡುಗಳ ಮಿಲನದ ಉದಾಹರಣೆಗಳಿಲ್ಲ.



ಕಾಲ ಬದಲಾದಂತೆ ಪರಿಸರ ಕ್ಷೀಣಿಸುತ್ತಿದೆ. ಕಾಗೆಗಳ ಜೀವನಶೈಲಿಯಲ್ಲಿ ಹಲವಾರು ಮಾರಕ ಬದಲಾವಣೆಗಳಾಗಿವೆ. ಪ್ರಯೋಗಗಳಲ್ಲಿ ಗೋಚರಿಸಿದ್ದೇನೆಂದರೆ ಅವು ಇಟ್ಟ ಹಿಕ್ಕೆಗಳಲ್ಲಿ ಅಲುಮೀನಿಯಂ, ಸೀಸ, ಪ್ಲಾಸ್ಟಿಕ್, ಇನ್ನಿತರೆ ಮಾರಕಗಳು. ಗೂಡುಗಳನ್ನು ಸಾಮಾನ್ಯವಾಗಿ ಬೇಸಿಗೆ-ಮಳೆಗಾಲದ ಮಧ್ಯದಲ್ಲಿ ಒಣ ಕಡ್ಡಿಗಳನ್ನು ಶೇಖರಿಸಿ ಮಧ್ಯದಲ್ಲಿ ಮೆತ್ತನೆಯ ಜಾಗ ಮಾಡಿ ಗೂಡು ಕಟ್ಟಿ 3-4 ಮೊಟ್ಟೆಗಳಿಡುವ ಪರಿಪಾಠ. ಆದರೀಗ ಗೂಡುಗಳು ಮರದ ಮೇಲೆ ಬದಲಾಗಿ ಮೊಬೈಲ್ ಟವರ್ ಗಳು, ತಾರಸಿಗಳು, ಮೇಲ್ಸೇತುವೆಗಳು, ಬೀದಿ ದೀಪ ಕಂಬಗಳು, ಕಡ್ಡಿ, ಹತ್ತಿಯ ಬದಲಾಗಿ ಕಬ್ಬಿಣ,ತಂತಿ,ಕೂದಲು, ಪ್ಲಾಸ್ಟಿಕ್ ಗಳನ್ನು ಬಳಸುತ್ತಿವೆ. ನಗರದ ಪರಿಸರ, ಮರಗಳ ಸಂಖ್ಯೆ ಕ್ಷೀಣಿಕೆ, ಮಲಿನ, ಮಾಲಿನ್ಯಗಳಿಗೆ ಇದಕ್ಕಿಂತ ನಿದರ್ಶನ ಬೇಕೆ?? 🏭🏭 ವಾಯುಮಾಲಿನ್ಯ, ಜಲಮಾಲಿನ್ಯದ ಪರಿಣಾಮಗಳು ಇನ್ನೂ ಸ್ಪಷ್ಟವಾಗಿ ತಿಳಿದಿಲ್ಲವಾದರೂ ರಣಹದ್ದುಗಳಲ್ಲಾದಂತೆ ಡೈಕ್ಲೋಫಿನಾಕ್ ನಂತಹ ಮಾರಕಗಳಿಂದ ಸಂತತಿ ಅಳಿವಿನಂಚಿಕೆ ಬರುವ ಕಾಲ ಹತ್ತಿರದಲ್ಲಿದೆ. ಶಬ್ಧಮಾಲಿನ್ಯದಿಂದ ಹೆಚ್ಚು ದೂರ ಮಿಲನದ

ಕರೆಗಳು ಕೇಳಿಸದಿರುವುದರಿಂದ ಗುಂಪುಗಳಲ್ಲೇ ಕೂಡಿಕೆಯಾಗಿ ಅನುವಂಶಿಕ ಗುಣಗಳು ಹರಡುವ ಸಾಧ್ಯತೆ ಹೆಚ್ಚಾಗಿ ವೈವಿಧ್ಯತೆ ಕಡಿಮೆಯಾಗಬಹುದು.

**ಪ್ರಶ್ನಾರ್ಥಕಗಳು?**

ಕಾಗೆಗಳು ಸ್ವಚ್ಛಂದವಾಗಿ ಜೀವಿಸಿ ಜೀವನ ನಡೆಸುವ ಹಕ್ಕು ಕಳೆದುಕೊಂಡಿವೆ. ಮನುಷ್ಯನ ಮಿತಿಮೀರಿದ ಅಟ್ಟಹಾಸಕ್ಕೆ ಸಾಥ್ ಕೊಟ್ಟಿವೆಯಾದರೂ ಈ ಮುಗ್ಧ ಸುಂದರ ಖಗಗಳು ನೆಲ ಕಚ್ಚಿದ ಗುಬ್ಬಚ್ಚಿಗಳಾಗಬೇಕೆ? ಇಡೀ ಭೂಮಿಗೆ ವರವಾಗಿ ಹುಟ್ಟಿ ಶಾಪವಾಗಿ ಪರಿಣಮಿಸಿ, ಆಶ್ರಯ ಕೊಟ್ಟ ಜೀವಕ್ಕೆ ಕ್ಯಾನ್ಸರ್ ಆಗಿ ಪರಿಣಮಿಸಿ ತಾನೂ ಸತ್ತು ಇಡೀ ಜೀವಿಯನ್ನೇ ಕೊಲ್ಲುವ  ಮನುಜನ ಪ್ರವೃತ್ತಿ ಬದಲಾಗಿ, ಈ ವಿಷವರ್ತುಲದಿಂದ ಹೊರಬರುವ ಋತುಚಕ್ರ ಶುರುವಾಗಲಿದೆಯೇ? ಅಥವಾ ಅಂತ್ಯದವರೆಗೂ ಯಕ್ಷ ಪ್ರಶ್ನೆಯಾಗೇ ಉಳಿಯಲಿದೆಯೇ? ಸಮಸ್ಯೆಯ ಬುಡವನ್ನರಿತು ಸ್ಪಂಧಿಸುವ ಜನಸ್ನೇಹಿ ರಾಜಕರಣ ಜೀವರಾಶಿಯ ಉಳಿವಿಗೆ ರಾಜ ಕಾರಣವಾಗಲಿದೆಯೇ? ಪರಿಸರದ ಉಳಿವಿನಲ್ಲೇ ದೇಶದ ಪ್ರಗತಿಯೆಂಬ ಸಾಮಾನ್ಯಜ್ಞಾನ ಸಾಮಾನ್ಯ ಜನರಿಗೆ ಮುಟ್ಟುತ್ತದೆಯೇ?

*"ಕಾಗೆಯೊಂದು ತಾನು ನೀರುಕಾಗೆ ಎಂದು ಬೀಗಿ ನೀರಿನಲ್ಲಿ ಧುಮುಕಿತು….ಮುಳುಗಿತು."*

ಹೇ ಮನುಜ, ನೀನು ಯಾಕೆ ಹಾಗೆ, ಪ್ರಶ್ನಿಸಿತು ಕಾಗೆ

ಮನುಜನುತ್ತರಿಸಿದ, ಹೇ ಕಾಗೆ ನಾ ಹಾಗೆ ಹಾಗೆ ನೀ ಹೋಗೇ.....



- ಮುರಳಿ .ಎಸ್



# ಧರೆ ಹತ್ತಿ ಉರಿದೊಡೆ ನಿಲಬಹುದೆ...?

ಮಾನವ ಈ ಭೂಮಿಯ ಮೇಲೆ ಅವತರಿಸಿ ಮಿಲಿಯಾಂತರ ವರ್ಷಗಳೇ ಆಗಿವೆ. ಅಷ್ಟೇ ಸಮಯವನ್ನು ಅವನು ಹೊಸ ಆವಿಷ್ಕಾರಗಳಿಗೆ ವಿನಿಯೋಗಿಸಿದ್ದಾನೆ. ಬೆಂಕಿಯ ಉಪಯೋಗವನ್ನು ಅರಿತಿದ್ದಾಗಲಿ, ಮೊದಲು ಗಾಲಿಯನ್ನು ತಯಾರಿಸಿದ್ದಾಗಲಿ ಮಾನವನ ಉಗಮದ ಕಾಲವನ್ನು ನೋಡಿದರೆ ತೀರ ಇತ್ತೀಚಿನದು ಎನ್ನಬಹುದು. ಅಷ್ಟೇ ಏಕೆ, ಹಿಂದಿನ ಕೆಲವು ಶತಮಾನದ ವರೆಗೂ ಯುದ್ಧಗಳಲ್ಲಿ ಕತ್ತಿ-ಗುರಾಣಿ, ಬಿಲ್ಲು-ಬಾಣ, ಕುದುರೆ, ಆನೆಗಳನ್ನೇ ಬಳಸಲಾಗುತ್ತಿತ್ತು. ಉಡಲು ಹತ್ತಿ, ಉಣ್ಣೆ, ಹೆಚ್ಚೆಂದರೆ ರೇಷ್ಮೆ, ಚರ್ಮದ ವಸ್ತ್ರಗಳನ್ನು ಬಿಟ್ಟರೆ ಬೇರೆ ಇರಲಿಲ್ಲ. ಮನೆಗಳನ್ನು, ಕೋಟೆ-ಕೊತ್ತಲಗಳನ್ನು ಕಟ್ಟಲು, ಕಲ್ಲು, ಮಣ್ಣು, ಮರ ಇತ್ಯಾದಿ ಸ್ಥಳೀಯವಾಗಿ ಲಭ್ಯವಿರುವ ವಸ್ತುಗಳನ್ನೇ ಬಳಸಲಾಗುತ್ತಿತ್ತು. ಆಹಾರ ಪದ್ದತಿಯೂ ಸ್ಥಳೀಯವಾಗಿ ಸಿಗುವ ದವಸ-ಧಾನ್ಯಗಳಿಂದಾಗಿರುತ್ತಿದ್ದವು. ಇವು ಯಾವುವು ರಾತ್ರಿ ಬೆಳಗಾಗುವುದರಲ್ಲಿ ಕಂಡುಹಿಡಿದವಲ್ಲ, ಶತಮಾನಗಳ, ಸಹಸ್ರಾರು ವರ್ಷಗಳ ಅನುಭವದಿಂದ ಕೂಡಿದ ಆವಿಷ್ಕಾರಗಳಾಗಿದ್ದವು. ಪ್ರಕೃತಿಯೊಂದಿಗಿನ ಅನುಸಂಧಾನವಾಗಿದ್ದವು.

**ಬದಲಾವಣೆಯ ಪರ್ವಕಾಲ**

ಎರಡನೇ ಮಹಾಯುದ್ಧ ವಿಶ್ವದ ದಿಕ್ಕು-ದೆಸೆಗಳನ್ನೇ ಸಂಪೂರ್ಣವಾಗಿ ಬದಲಿಸಿತು. ಯುದ್ಧದ ನಂತರದ ದಿನಗಳು ತೀವ್ರ ಕೈಗಾರಿಕೀಕರಣಕ್ಕೆ ಅವಕಾಶಗಳನ್ನು ಕಲ್ಪಿಸಿ ಔದ್ಯೋಗೀಕರಣಕ್ಕೆ ಹೊಸ ಭಾಷ್ಯ ಬರೆಯಿತು.

ಮಹಾಯುದ್ಧದ ನಂತರ ಹಲವು ರಾಷ್ಟ್ರಗಳು ದಾಸ್ಯದಿಂದ ಮುಕ್ತಿಪಡೆದು ಸ್ವತಂತ್ರವಾದವು. ಆಗತಾನೆ ಜನಿಸಿದ ಮಗುವಿನಂತಿದ್ದ ಈ ರಾಷ್ಟ್ರಗಳಿಗೆ ಇದ್ದ ಬಹುದೊಡ್ಡ ಸವಾಲೆಂದರೆ, ತಮ್ಮ ಸುತ್ತ ಇರುವ ಬಲಿಷ್ಠ ರಾಷ್ಟ್ರಗಳ ಸರಿಸಮಕ್ಕೆ ಎದ್ದು ನಿಲ್ಲುವುದು. ಇಲ್ಲವಾದಲ್ಲಿ ಪ್ರಬಲ ರಾಷ್ಟ್ರಗಳ ಹಿಡಿತಕ್ಕೆ ಮತ್ತೆ ಸಿಲುಕುವ ಭಯ ಅವುಗಳನ್ನು ಕಾಡಿತ್ತು. ಆದ್ದರಿಂದ ಅನೇಕ ರಾಷ್ಟ್ರಗಳು ತಮ್ಮ ನೆಲ-ಜಲ ಎಲ್ಲವನ್ನು ಅಭಿವೃದ್ಧಿಯ ಹರಿಕಾರನಂತೆ ಕಂಡು ಕೈಗಾರಿಕೀಕರಣಕ್ಕೆ ಮುಕ್ತಗೊಳಿಸಿದವು. ಭಾರತವೂ ಇದಕ್ಕೆ ಹೊರತಾಗಿ ನಿಲ್ಲಲಿಲ್ಲ. ದೇಶದಲ್ಲಿನ ಅಪಾರವಾದ ನೈಸರ್ಗಿಕ ಸಂಪತ್ತು ಇದಕ್ಕೆ ಪೂರಕವಾಯಿತು. ಗುಡ್ಡ, ಬೆಟ್ಟ, ಕಾಡು, ಬಯಲು, ನೀರು ಹೀಗೆ ಎಲ್ಲವೂ ಬೇಡಿಕೆಗಳ ಪೂರೈಸುವ ಸಾಧನಗಳಾದವು.



ಸ್ವಾತಂತ್ರ್ಯಾ ನಂತರದ ಕ್ಷಿಪ್ರ ಕೈಗಾರಿಕೀಕರಣ, ಹಸಿರು ಕ್ರಾಂತಿ ಮತ್ತು ಕ್ಷೀರ ಕ್ರಾಂತಿ ದೇಶದ ಆರ್ಥಿಕ-ಸಾಮಾಜಿಕ ಬದಲಾವಣೆಯ ಜೊತೆಜೊತೆಗೆ ನೈಸರ್ಗಿಕ ಬದಲಾವಣೆಯನ್ನೂ ಉಂಟುಮಾಡಿತು. ಕೃಷಿ ಹಾಗೂ ಕೈಗಾರಿಕೆಗಳ ನೀರಿನ ಅವಶ್ಯಕತೆಯನ್ನು ಪೂರೈಸಲು ನೂರಾರು ಅಣೆಕಟ್ಟೆಗಳನ್ನು ನಿರ್ಮಿಸಲಾಯಿತು, ಸುಗಮ ಸಂಚಾರಕ್ಕೆ ಸಾವಿರಾರು ಕಿಮೀ ಹೆದ್ದಾರಿಗಳು ನಿರ್ಮಾಣಗೊಂಡವು, ಲಕ್ಷಾಂತರ ಹೆಕ್ಟೇರು ಭೂಮಿಯನ್ನು ಕೃಷಿ ಹಾಗೂ ಕೈಗಾರಿಕೆಗಳಿಗೆ ಬಿಟ್ಟುಕೊಡಲಾಯಿತು. ಇವೆಲ್ಲವೂ ಸಂಪನ್ಮೂಲಗಳ ಭಂಡಾರದಂತಿದ್ದ ಅರಣ್ಯವನ್ನು ಆಪೋಶನ ತೆಗೆದುಕೊಂಡವು. ಪರಿಣಾಮವಾಗಿ, ಪ್ರಕೃತಿಯು ತನ್ನ ಲಯವನ್ನು ಕಳೆದುಕೊಂಡಿತು. ನೈಸರ್ಗಿಕ ವಿಕೋಪಗಳು, ನೆರೆ-ಬರ, ತಾಪಮಾನದಲ್ಲಿನ ಅನಿರೀಕ್ಷಿತ ಏರಿಳಿತಗಳು ಅಭಿವೃದ್ಧಿಯ ಕನಸು ಪ್ರಕೃತಿಯ ಸಹಯೋಗವಿಲ್ಲದೆ ನನಸಾಗದು ಎಂಬುದನ್ನು ಸಾರಿದುವು.

**ಬೆಕ್ಕಿಗೆ ಗಂಟೆ ಕಟ್ಟುವವರಾರು?**

ಹವಾಮಾನ ವೈಪರಿತ್ಯಗಳು ಕೇವಲ ಭಾರತ ಮಾತ್ರವಲ್ಲದೆ ಇಡೀ ವಿಶ್ವವನ್ನೇ ಕಾಡುತ್ತಿದೆ. ಪರಿಸರದ ನಾಶಕ್ಕೆ

ಜಗತ್ತಿನ ಎಲ್ಲ ರಾಷ್ಟ್ರಗಳು ಅರಣ್ಯ ಸಂಪತ್ತಿನಮೇಲೆ ನಿರಂತರವಾಗಿ ಆಕ್ರಮಿಸುತ್ತ ಅವುಗಳ ನಾಶಮಾಡಿರುವುದೇ ಆಗಿದೆ. ವಿಶ್ವದ ಹಿರಿಯಣ್ಣನೆನಿಸಿಕೊಂಡ ಅಮೆರಿಕದಿಂದ ಹಿಡಿದು ಆಫ್ರಿಕಾದ ಕಡು ಬಡ ರಾಷ್ಟ್ರದ ತನಕ ಎಲ್ಲವು ಹವಾಮಾನ ವೈಪರಿತ್ಯದ ಹೊಡೆತಕ್ಕೆ ನಲುಗಿವೆ. ಸನ್ನಿವೇಶದ ತೀವ್ರತೆಯನ್ನು ಅರಿತು ಸಂಯುಕ್ತ ರಾಷ್ಟ್ರದ ಅಂಗ ಸಂಸ್ಥೆಯಾದ UNFCCC ಯು ಪ್ರತಿ ವರ್ಷ ಸದಸ್ಯ ರಾಷ್ಟ್ರಗಳ ಸಭೆ ನಡೆಸಿ, ಹವಾಮಾನ ವೈಪರಿತ್ಯಗಳನ್ನು ಮುಂಬರುವ ವರ್ಷಗಳಲ್ಲಿ, ದಶಕಗಳಲ್ಲಿ ನಿಯಂತ್ರಿಸುವ ಕುರಿತು ಕಾರ್ಯಸೂಚಿಯನ್ನು ನಿಗದಿ ಪಡಿಸುತ್ತಿದೆ. ಈ ಕಾರ್ಯಸೂಚಿಗನುಗುಣವಾಗಿ ಸದಸ್ಯ ರಾಷ್ಟ್ರಗಳು ತಮ್ಮ ಕಾರ್ಯಯೋಜನೆಯನ್ನು ರೂಪಿಸಿ INDCಗೆ ಪ್ರಸ್ತಾವನೆ ಸಲ್ಲಿಸಬೇಕು. ಪ್ರಸ್ತಾಪಿಸಲ್ಪಟ್ಟ ಯೋಜನೆಗಳು ಅಷ್ಟು ಸುಲಭದಲ್ಲಿ ಕಾರ್ಯ ರೂಪಕ್ಕೆ ತರಲಾಗುವುದಿಲ್ಲ. ಅದಕ್ಕೆ ಸರ್ಕಾರಗಳು ತಮ್ಮ ಕಾಯ್ದೆ-ಕಾನೂನುಗಳಲ್ಲಿ ಸುಧಾರಣೆಯನ್ನು ಮಾಡಬೇಕಾಗುತ್ತದೆ. ಸರ್ಕಾರಿ, ಖಾಸಗಿ ಉದ್ಯಮಗಳು-ಕೈಗಾರಿಕೆಗಳು ತಮ್ಮ ಉತ್ಪಾದನಾ ವ್ಯವಸ್ಥೆಯಲ್ಲಿ ಮಹತ್ತರ ಬದಲಾವಣೆಗಳನ್ನು ತರಬೇಕಾಗುತ್ತದೆ. ಜೊತೆಗೆ ಜನರ ಜೀವನ ಶೈಲಿ, ಬೇಡಿಕೆಗಳು, ನಗರೀಕರಣ ಇತ್ಯಾದಿಗಳೂ ಬದಲಾವಣೆ ಕಾಣಬೇಕಿದೆ. ಇವೆಲ್ಲವು ಗುರಿಸಾಧನೆಯ ಹಾದಿಯಲ್ಲಿ ಅಡ್ಡಲಾಗಿ ನಿಲ್ಲುತ್ತವೆ.



ಹವಾಮಾನ ಬದಲಾವಣೆಯ ಬರೆ ಬಿದ್ದರೂ, ಇನ್ನೂ ಅಭಿವೃದ್ಧಿಯ ಬಿಸಿಲು ಕುದುರೆಯನ್ನೇರಿ ಹೊರಟಿರುವ ಸರ್ಕಾರಗಳು ಅಂತರಾಷ್ಟ್ರೀಯ ಒತ್ತಡದಿಂದ ತಪ್ಪಿಸಿಕೊಳ್ಳಲು ಮತ್ತು ವಿಶ್ವ ಮಟ್ಟದಲ್ಲಿ ಇತರೆ ಲಾಭಗಳಿಸಲು ಕಾರ್ಯ ಸಾದನೆಯ ನಿಜ ಅಂಕಿ-ಅಂಶಗಳನ್ನ ಮರೆಮಾಚುತ್ತವೆ. ಭಾರತವು ಹವಾಮಾನ ಸುಧಾರಣೆಯಲ್ಲಿ ತೆಗೆದುಕೊಂಡ ಕ್ರಮಗಳು ತೃಪ್ತಿದಾಯಕವಲ್ಲದಿದ್ದರೂ ಕಳಪೆಯಿಲ್ಲ ಎಂದು ಒಂದು ವರದಿ ಹೇಳುತ್ತದೆ. INDCಗೆ

ಸಲ್ಲಿಸಿದ ದಾಖಲೆಗಳ ಪ್ರಕಾರ ಭಾರತವು 2015ರಿಂದ 2030ರ ವರೆಗೆ ಅಂದಾಜು 2.5 ಟ್ರಿಲಿಯ ಅಮೆರಿಕನ್ ಡಾಲರನ್ನು ಹವಾಮಾನ ಸುಧಾರಣೆಗೆ ವಿನಿಯೋಗಿಸಬೇಕಾಗುತ್ತದೆ. ಈಗತಾನೆ ಅಭಿವೃದ್ಧಿಯ ಕನಸು ಕಾಣುತ್ತಿರುವ ರಾಷ್ಟ್ರಗಳೂ ವರ್ಷಕ್ಕೆ ಅಂದಾಜು USD 93 ಮಿಲಿಯನ್ ಹಣವನ್ನು ವಿನಿಯೋಗಿಸಬೇಕಾಗಿದೆ. ಅಭಿವೃದ್ಧಿಯನ್ನು ಕೇವಲ ಹಣದ ಮೂಲಕ ಅಳೆಯುವ ಮನಸ್ಸುಗಳು ಹವಾಮಾನ ಸುಧಾರಣೆಯನ್ನೂ ಕೇವಲ ಹಣದ ಲೆಕ್ಕಾಚಾರದಲ್ಲಿ ಮುಗಿಸಿದರೆ ದುರಂತ ಇನ್ನು ಹೆಚ್ಚು ದೂರ ಇಲ್ಲ.

**ಹಿರಿಯರ ಪೈಪೋಟಿ:**

ಚೀನ-ಅಮೇರಿಕ ಹೆಚ್ಚು ಮಾಲಿನ್ಯ ಉಂಟುಮಾಡುವ ದೇಶಗಳ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದುಕೊಂಡಿವೆ. ಭಾರತ 4ನೇ ಸ್ಥಾನಗಳಲ್ಲಿದೆ. ಅಭಿವೃದ್ಧಿಯ ಈ ಪೈಪೋಟಿಯಲ್ಲಿ ದೇಶಗಳು ವಾಸ್ತವವನ್ನು ಅರಿಯುವಲ್ಲಿ ಎಡವುತ್ತಿವೆ. ಯಾವುದೇ ಸರ್ಕಾರ ಬರಲಿ ಎಲ್ಲವು ಅಭಿವೃದ್ಧಿ, ಉದ್ಯೋಗ ಸೃಷ್ಟಿ, GDP ಹೆಚ್ಚಿಸುವ ಬಗೆಗೆ ತಲೆಕೆಡಿಸಿಕೊಳ್ಳುವಷ್ಟು ಪರಿಸರ ಸಮತೋಲನ, ಜೀವ ವೈವಿದ್ಯ ಸಂರಕ್ಷಣೆಯ ಜೊತೆ ಸ್ವಾಭಾವಿಕ-ಸುಸ್ಥಿರ ಅಭಿವೃದ್ಧಿಯ ಅವಶ್ಯಕತೆ ಕುರಿತಾಗಿ ನಿಜವಾದ ಕಾಳಜಿ ತೋರುತ್ತಿಲ್ಲ.

ಮುಂದುವರಿದ ದೇಶವಾದ ಅಮೇರಿಕ ಕೂಡ, 'ಹಿರಿಯಣ್ಣ'ನೆಂಬ ಹಣೆಪಟ್ಟಿ ಕಳೆದುಕೊಳ್ಳುವ ಭಯದಲ್ಲಿ ಈಗಲೂ ಅಭಿವೃದ್ಧಿಯ ಮಾಯಾಜಿಂಕೆಯ ಬೆನ್ನಹಿಂದೆ ಬಿದ್ದಿದೆ. ಅಮೇರಿಕದ ಚುನಾಯಿತ ಅಧ್ಯಕ್ಷರಾದ ಡೊನಾಲ್ಡ್ ಟ್ರಂಪ್ ಕೂಡ ಅಭಿವೃದ್ಧಿ, ಉದ್ಯೋಗ ಸೃಷ್ಟಿಯ ಮಂತ್ರವನ್ನೇ ಜಪಿಸುತ್ತ ಅಧಿಕಾರಕ್ಕೆ ಬಂದಿದ್ದಾರೆ. ಅಷ್ಟೇ ಆಗಿದ್ದರೆ ಚಿಂತಿಸಬೇಕಿರಲಿಲ್ಲ, ಟ್ರಂಪ್ ಒಂದು ಹೆಜ್ಜೆ ಮುಂದೆ ಹೋಗಿ ಭೂ ತಾಪಮಾನ ಏರಿಕೆ, ಹವಾಮಾನ ವೈಪರಿತ್ಯ ಎಲ್ಲವು ಕಟ್ಟು ಕಥೆ, ಸುಳ್ಳು, ಚೀನಾದ ಕುತಂತ್ರ ಎಂದು ವಾದಿಸಿದ್ದಾರೆ. ಅಧ್ಯಕ್ಷನಾದರೆ ಪ್ಯಾರಿಸ್ ಒಪ್ಪಂದದಿಂದ ಹಿಂದೆ ಸರಿಯುವ ಇಂಗಿತವನ್ನು ವ್ಯಕ್ತಪಡಿಸಿದ್ದರು. ಟ್ರಂಪ್ ನ ಈ ನಿಲುವು ಉಳಿದ ಸದಸ್ಯ ರಾಷ್ಟ್ರಗಳು ಹವಾಮಾನ ವೈಪರಿತ್ಯ ತಡೆಗಾಗಿ ತೆಗೆದುಕೊಂಡಿರುವ ನಿರ್ಧಾರಗಳ ಮೇಲೆ ಪರಿಣಾಮವನ್ನು ಬೀರುವ ಸಾಧ್ಯತೆ ಇದೆ. ವಿಜ್ಞಾನಿಗಳು, ಪರಿಸರವಾದಿಗಳು ಅವರ ಈ ನಿಲುವನ್ನು ಖಂಡಿಸಿದ್ದರೂ, ಭವಿಷ್ಯದ ಪರಿಣಾಮಗಳ ಕುರಿತಾಗಿ ಆತಂಕದಲ್ಲಿದ್ದಾರೆ.



**ಶ್ರೀ ಸಾಮಾನ್ಯನಿಗೆ:**

ಕಳೆದ ಶತಮಾನದಲ್ಲಿ ಭೂಮಿಯ ಸರಾಸರಿ ಉಷ್ಣಾಂಶ 0.8˚C ಅಷ್ಟು ಹೆಚ್ಚಾದ ಮಾತ್ರಕ್ಕೆ ಇಷ್ಟೆಲ್ಲ ನೈಸರ್ಗಿಕ ವಿಕೋಪಗಳನ್ನ ಕಾಣುತ್ತಿದ್ದೇವೆ. ಈ ಶತಮಾನವು ಉಷ್ಣಾಂಶದಲ್ಲಿ ಸರಾಸರಿ 2.5˚C ಅಷ್ಟು ಹೆಚ್ಚುವ ಅಂದಾಜನ್ನು ವಿಜ್ಞಾನಿಗಳು ಮಾಡಿದ್ದಾರೆ. ಉಷ್ಣಾಂಶದಲ್ಲಿನ ಏರಿಕೆಯನ್ನು ತಡೆಯಲು UNFCCC ಹಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಅದರಂತೆ 2.5˚C ಇಂದ 2.0˚C, ಅಂದರೆ 0.5˚C ಅಷ್ಟು ತಾಪಮಾನವನ್ನು ಕಡಿಮೆಗೊಳಿಸಿದರೂ ಅದು ಬಹುದೊಡ್ಡ ಸಾಧನೆಯಾದೀತು ಎಂದಿದೆ. ತಿಳಿದಿರಲಿ, ಸಾವಿರಾರು ವರ್ಷಗಳ ಹಿಂದೆ ತಾಪಮಾನ ಸರಾಸರಿ 4-5˚C ಅಷ್ಟು ಇಳಿದಾಗ ಭೂಮಿ ಶೀತಯುಗವನ್ನ ಕಂಡಿದೆ. ಅದೆ ಹೆಚ್ಚಾದರೆ? ಧರೆಯೇ ಹತ್ತಿ ಉರಿಯಬಹುದೇನೊ.







- ಕಲುಬಿ ಬ್ರದರ್ಸ್



# ಹಾವು ಕಾಲು ಕಳೆದುಕೊಂಡಿದ್ದು ಹೇಗೆ?

ನಾವು ಚಿಕ್ಕವರಿದ್ದಾಗ ತುಂಬಾ ತಲೆ ತಿಂದ ಪ್ರಶ್ನೆಗಳಲ್ಲಿ "ಹಾವುಗಳಿಗೆ ಏಕೆ ಕಾಲು ಇಲ್ಲ?" ಎಂಬುದು ಒಂದು. ಯಾರನ್ನು ಕೇಳಿದರೂ ಬರೀ ಕತೆ ಹೇಳೋರು. ಹಿಂದಿನ ಕಾಲದಲ್ಲಿ ಹಾವಿಗೂ ಕಾಲು ಇತ್ತು! ಆದರೆ ಕಣ್ಣು ಇರಲಿಲ್ಲ. ಇನ್ನೊಂದು ಒನಕೆಬಂಡಿ ಇತ್ತು ಅದಕ್ಕೆ ಕಾಲು ಇರಲಿಲ್ಲ! ಕಣ್ಣಿತ್ತು. ಇಬ್ಬರು ಒಂದು ದಿನ ಮಾತಾಡಿಕೊಂಡು ಹಾವು, ಒನಕೆಬಂಡಿಗೆ ಕಾಲು ಕೊಟ್ಟುಬಿಟ್ಟು, ಅದರತಾವಿಂದ ಕಣ್ಣು ಪಡಕೊಳ್ತು. ಹೀಗೆ ಶೇರ್ ಮಾಡಿಕೊಂಡು ಸುಖವಾಗಿ ಇವೆ. ಎಂದು ಹೇಳಿ ಕತೆ ಮುಗಿಸುತ್ತಿದ್ದರು. ನಾವು ಹೈಸ್ಕೂಲಿಗೆ ಬಂದ ಮೇಲೆ ನಾವು ಮನುಷ್ಯರೇ ಅಲ್ಲ! ಮರದ ಮೇಲಿರುವ ಮಂಗಗಳು ನಮ್ಮ ಪೂರ್ವಜರು ಎಂದು ಹೇಳಿ ಡಾರ್ವಿನ್ ವಿಕಾಸವಾದದ ಪ್ರಕಾರ ನಾವು ಬಾಲವನ್ನು ಹೇಗೆ ಕಳೆದು ಕೊಂಡೆವು ಎಂಬುದನ್ನೂ ತಿಳಿಸಿಕೊಟ್ಟರು.

ಆದರೆ ಇದಕೆಲ್ಲಾ ಮೂಲ ಕಾರಣ ಏನು? ಹೇಗೆ ಪ್ರಾಣಿಗಳ ದೇಹ ಬದಲಾಗುತ್ತದೆ? ಎಂಬುದು ಇನ್ನೂ ಪ್ರಶ್ನೆಯಾಗಿಯೇ ಉಳಿದಿತ್ತು. ಈಗ ವಿಜ್ಞಾನಿಗಳು ಜೀವಿಗಳ ಜೀನ್ಸ್ ನಲ್ಲಿ ಸಣ್ಣ ಬದಲಾವಣೆಯಾದರೂ ಅದು ಅವುಗಳ ದೇಹರಚನೆಯಲ್ಲಿ ದೊಡ್ಡ ಮಾರ್ಪಾಡು ಉಂಟುಮಾಡುತ್ತದೆ ಎಂದು ಕಂಡುಹಿಡಿದಿದ್ದಾರೆ. 150 ಮಿಲಿಯನ್ ವರ್ಷಗಳ ಹಿಂದೆ ಹಾವುಗಳ ಜೀನ್ಸ್ ನಲ್ಲಿ ಉಂಟಾದ ಸಣ್ಣ ಬದಲಾವಣೆಯಿಂದ ಕಾಲುಗಳನ್ನು ಕಳೆದುಕೊಂಡಿರಬೇಕು ಎಂದು ವಾದಿಸುತ್ತಿದ್ದಾರೆ. ಆ ಹಾವಿನ ಪೂರ್ವಜನ ಜೀನ್ಸ್ ನಲ್ಲಿ ಉಂಟಾದ ಸಣ್ಣ ಮ್ಯೂಟೇಷನ್, ಹಾವುಗಳು ಕಾಲುಕಳೆದುಕೊಳ್ಳಲು ಮಹತ್ವದ ಪಾತ್ರವಹಿಸಿದೆ ಎನ್ನುತ್ತಿದ್ದಾರೆ.

ನೆಲದ ಮೇಲೆ ವಾಸಿಸುವ ಕಶೇರುಕಗಳಿಗೆ, ಚಲಿಸಲು ಕಾಲು ಅತೀ ಮುಖ್ಯ. ಆದರೆ ಸರೀಸೃಪ ಗುಂಪಿನ ಈ ಹಾವುಗಳು ಚಲನೆಗೆ ಉಪಕಾರಿಯಾದ ಕಾಲುಗಳನ್ನು ಎಂದೋ ಕಳೆದುಕೊಂಡು ಬಿಟ್ಟಿವೆ.! ಜೀವವಿಕಾಸದಲ್ಲಿ ತುಂಬಾ ಹಳೆಯದಾದ ಹೆಬ್ಬಾವುಗಳ ದೇಹದ ಒಳಗೆ ಕಾಲಿನ ಮೂಳೆಯ ಕುರುಹುಗಳನ್ನು ಈಗಲೂ ಕಾಣಬಹುದು. ಆದರೆ ನಾಗರ ಹಾಗೂ ಮಂಡಲ ಹಾವುಗಳ ದೇಹದಲ್ಲಿ ಕಾಲಿನ ಈ ಕುರುಹುಗಳು ಇಲ್ಲವಾದ್ದರಿಂದ ಇವು ಜೀವವಿಕಾಸದಲ್ಲಿ ಇತ್ತೀಚೆಗೆ ಬಂದವು ಎನ್ನಬಹುದು. ಹಾವುಗಳು ಕಾಲುಗಳನ್ನು ಕಳೆದುಕೊಂಡ ರಹಸ್ಯವನ್ನು ತಿಳಿಯಲು ವಿಜ್ಞಾನಿಗಳು ಹಾವಿನ ಸಂಪೂರ್ಣ ಜೀನ್ಸ್ ಅನ್ನು ಸೀಕ್ವೆನ್ಸ್ ಮಾಡಿದ್ದಾರೆ. ಅದರಲ್ಲಿ ಕಾಲುಗಳ ಬೆಳವಣಿಗೆಗೆ ಕಾರಣವಾದ ಜೀನ್ ಅನ್ನು ಗುರುತಿಸಿ ಪ್ರತ್ಯೇಕಿಸುವಲ್ಲಿ ಸಪಲವಾಗಿದ್ದಾರೆ.

ಹಾವುಗಳ ಭ್ರೂಣದ ಬೆಳವಣಿಗೆಯನ್ನು ಗಮನಿಸಿದರೆ ಮೊದಲು ಅವುಗಳಿಗೆ ಕಾಲಿನಂತ ರಚನೆಗಳು ಕಂಡುಬರುತ್ತವೆ. ಆದ್ರೆ ಅದು ಕ್ರಮೇಣ ಕುಂಟಿತಗೊಳ್ಳುತ್ತದೆ. ಮಾನವನ ಕಾಲುಗಳ ಹುಟ್ಟಿಗೆ ಕಾರಣವಾದ ಜೀನ್ ಅನ್ನು ಪ್ರತ್ಯೇಕಿಸಿ ಇಲಿಯ ಮೇಲೆ ಪ್ರಯೋಗಿಸಿ ನೋಡಿದಾಗ ಇಲಿಯ ಕಾಳುಗಳು ಸ್ವಾಭಾವಿಕವಾಗಿ ಮೂಡಿವೆ. ಅದೇ ಹಾವಿನ ಕಾಲಿಗೆ ರಚನೆಗೆ ಕಾರಣವಾದ ಜೀನ್ ಅನ್ನು ಇಲಿಯ ಮೇಲೆ ಪ್ರಯೋಗಿಸಿದಾಗ ಇಲಿಯ ಕಾಲು ರಚನೆ ಕುಂಟಿತಗೊಂಡಿರುವುದು ಗೋಚರಿಸಿದೆ. ಇದರಿಂದ ಜೀನ್ಸ್ ನಲ್ಲಿ ಉಂಟಾದ ಸಣ್ಣ ಬದಲಾವಣೆಯಿಂದ ಹಾವಿಗೆ ಕಾಲಿಲ್ಲದಂತೆ ಆಗಿದೆ ಎಂದು ತಿಳಿಸಿದ್ದಾರೆ. ಇಷ್ಟೇ ಅಲ್ಲದೆ ಅದರ ಬೆನ್ನು ಮೂಳೆ ಉದ್ದವಾಗಿರುವುದು ಪಕ್ಕೆಲುಬುಗಳ ಸಂಖ್ಯೆ ಹೆಚ್ಚಾಗಿರುವುದು ಈ ಸಣ್ಣ ಸಣ್ಣ ಜೀನ್ ಮ್ಯೂಟೇಶನ್ ಕಾರಣ ಎಂದು ತಿಳಿಸಿಕೊಟ್ಟಿದ್ದಾರೆ. ಒಟ್ಟಿನಲ್ಲಿ ಬಿಲದಲ್ಲಿ ಅವುತು ಕುಳಿತ ಇಲಿಯನ್ನು ಹಿಡಿಯಲು ಅದರ ದೇಹರಚನೆ ಸಹಕಾರಿಯಾಗಿದೆ.

ಶಬ್ದಾರ್ಥ

Genes: ವಂಶವಾಹಿ,. Reptile: ಸರೀಸೃಪ,. Vertebrates: ಬೆನ್ನು ಮೂಳೆಯಿರುವ ಜೀವಿಗಳ ಗುಂಪು,. Evolution : ಜೀವವಿಕಾಸ,. Mutation: ವಿಕೃತಿ.



- ಶಂಕರಪ್ಪ .ಕೆ .ಪಿ

# ಗಳೊಳಗೆ–ಗಳಿಲ್ಲ

ಕೆರೆಯ ಪರಿಸರದೊಳಗೆ
ಜೀವ ವೈವಿಧ್ಯ ವಿಲ್ಲ
ಸಾಲು ಮರಗಳ ಸಾಲೊಳಗೆ
ಚಿಲಿಪಿಲಿಯ ಕಲರವವಿಲ್ಲ

ಪಕ್ಷಿಧಾಮದೊಳಗೆ
ವೈವಿಧ್ಯ ಪಕ್ಷಿ ಸಂಕುಲಗಳಿಲ್ಲ
ಹೂ ತೋಟದೊಳಗೆ
ದುಂಬಿ ಜೇನು ಹುಳುಗಳಿಲ್ಲ

ಹುಲ್ಲು ಗಾವಲಿನೊಳಗೆ
ಹಸಿರಿಲ್ಲ, ಹಸಿರ ಉಸಿರಿಲ್ಲ
ಝರಿ ತೊರೆಗಳೊಳಗೆ
ನೀರಿಲ್ಲ, ನೀರ ಸೊಬಗಿಲ್ಲ


ಗುಡ್ಡಗಾಡೊಳಗೆ
ಜೀವ ಜಂತುಗಳಿಲ್ಲ
ಕೆರೆ ಕೊಳಗಳೊಳಗೆ
ಕಮಲ ನೈದಿಲೆಯಿಲ್ಲ, ಹಂಸ ವಿಹಾರಗಳಿಲ್ಲ

ಕಳೆದು ಹೋದ ಕತ್ತಲಳೊಳಗೆ
ಜಾಗತೀಕ ತಾಪಮಾನದ ಕಾವಿನೊಳಗೆ
ಹವಮಾನ ವೈಪರೀತ್ಯದೊಳಗೆ
ವನ್ಯಜೀವಕೆಂದೂ ಆನಂದವಿಲ್ಲ

- ಕೃಷ್ಣನಾಯಕ್


ಪ್ರಕೃತಿ ಬಿಂಬ
ಈ ಕಾಡು ನನ್ನದೇ ಮನೆ. . .!


ಇಷ್ಟೊಂದೆತ್ತರ ಈ ಮರ...!


ಮಕರಂದ ಇದೆಯೋ ಇಲ್ಲ ಬೇರೆಯುವರ
ಪಾಲಾಗಿದೆಯೋ. . .!


ಇಲ್ಲಿಗೇಕೆ ಬಂದ್ರಪ್ಪ ಇವ್ರು. . .!




ಬೇಟೆನೇ ಇಲ್ಲ ಇವತ್ತು...!